**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref**:06/2024

ಎಂ.ಡಬ್ಲ್ಯೂ-1

**ದಿನಾಂಕ 27.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀಮತಿ.ಎ.ಆರ್. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. Order of reference ನ್ನು ನಾನು ಬೇರೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಹೌದು. 2 ನೇ ಪಕ್ಷಗಾರರ ಸಂಸ್ಥೆಯನ್ನು Rung Suns ಸಂಸ್ಥೆಯವರು takeover ಮಾಡಿದ್ದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿ. ನಮ್ಮ ಸಂಸ್ಥೆಯಲ್ಲಿ Works committee ಇರುತ್ತದೆ ಎಂದರ ಸಾಕ್ಷಿ Cyient DLM welfare association ಇರುತ್ತದೆ ಎನ್ನುತ್ತಾರೆ. ಸದರಿ Works committee ಯು ಕಲಂ 3 ರ ಪ್ರಕಾರ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಸಂಸ್ಥೆಯಲ್ಲಿ 260 ಖಾಯಂ ನೌಕರರು ಕೆಲಸ ಮಾಡುತ್ತಿರುತ್ತಾರೆ. works committee ಯ ಸದಸ್ಯರನ್ನು ಆಡಳಿತ ವರ್ಗದವರು ಆಯ್ಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಸಂಘವು 2023 ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಂಸ್ಥೆಯ ಆಡಳಿತ ವರ್ಗವು ಸಂಘವು ಅಸ್ತಿತ್ವಕ್ಕೆ ಬಂದಿದ್ದ ಬಗ್ಗೆ ಪತ್ರ ನೀಡಿದ್ದರೂ ಕೂಡ ಅದನ್ನು ಆಡಳಿತ ವರ್ಗ ಸ್ವಿಕಾರ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರು ಸದರಿ ಸಂಘದ office bearers ಆಗಿದ್ದರು ಮತ್ತು 1 ನೇ ಪಕ್ಷಗಾರ ಸಂಖ್ಯೆ-5 ಮತ್ತು 6 ರವರು ಸಂಘದ ಸದಸ್ಯರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಂಚೆ ಮೂಲಕ ಕಳುಹಿಸಿದ ಪತ್ರವನ್ನು ಆಡಳಿತ ವರ್ಗದವರು ತಿರಸ್ಕರಿಸಿದ್ದರು ಎಂದರೆ ಸರಿಯಲ್ಲ.

ಸಂಘದ Office bearers ಗಳು ಆಡಳಿತ ವರ್ಗದ ಜೊತೆ bilateral relations ಗೆ ಸಂಬಂಧಿಸಿದಂತೆ ಚರ್ಚೆ ಮಾಡಬೇಕು ಎಂದು convince ಮಾಡಲು ಪ್ರಯತ್ನ ಮಾಡಿದ್ದರು ಆದರೆ ಆಡಳಿತ ವರ್ಗ ಅದಕ್ಕೆ ಒಪ್ಪಿರಲ್ಲಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಗೆ ದೃಡಿಕೃತ ಸ್ಥಾಯಿ ಆದೇಶ (Certified standing orders) ಇರುತ್ತದೆ. ಸದರಿ ಸ್ಥಾಯಿ ಆದೇಶವು ಸುಮಾರು 2018 ನೇ ಇಸವಿಯಲ್ಲಿ ದೃಡಿಕೃತಗೊಂಡಿರುತ್ತದೆ. ದೃಡಿಕೃತ ಸ್ಥಾಯಿ ಆದೇಶವು Rung suns electronics ಇದ್ದಾಗಲೆ ದೃಡಿಕೃತಗೊಂಡಿತ್ತು ಎಂದರೆ ಸರಿಯಲ್ಲ. ಸ್ಥಾಯಿ ಆದೇಶದಲ್ಲಿ ಒಬ್ಬ ಕಾರ್ಮಿಕನಿಗೆ ಬಡ್ತಿ ನೀಡಲು ಯಾವುದೇ ನಿಯಮ ಇಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಕಾರ್ಮಿಕನಿಗೆ ನೀಡಿರುವ ನೇಮಕಾತಿ ಆದೇಶದಲ್ಲಿಯೂ ಕೂಡ ಬಡ್ತಿ ನೀಡುವ ಬಗ್ಗೆ ಯಾವುದೇ ಖಂಡಿಕೆ ಇಲ್ಲ ಎಂದರೆ ನೋಡಬೇಕಾಗುತ್ತದೆ ಎನ್ನುತ್ತಾರೆ. ಕೆಲಸಗಾರರು ಹಾಗೂ ಆಡಳಿತ ವರ್ಗಾದ ನಡುವೆ ಬಡ್ತಿ ನಿಯಮಾವಳಿ ಬಗ್ಗೆ ಯಾವುದೇ ಒಡಂಬಡಿಕೆ ಆಗಿಲ್ಲ ಎಂದರೆ ಸಾಕ್ಷಿ ಆ ರೀತಿ ಯಾವುದು ಇಲ್ಲ ಎನ್ನುತ್ತಾರೆ. ದಿನಾಂಕಃ11.08.2023 ರಲ್ಲಿ 1 ನೇ ಪಕ್ಷಗಾರ ಸಂಖ್ಯೆ-1, 2, 3 ಹಾಗೂ 5 ರವರನ್ನು ಕಾರ್ಖಾನೆಯಿಂದ ಹೊರಗೆ ಹಾಕಿದ್ದೇವು ಎಂದರೆ ಸರಿಯಲ್ಲ. ಸದರಿ ಕಾರ್ಮಿಕರನ್ನು ಪೋಲಿಸರ ಮುಖಾಂತರ ಹೊರಗೆ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 1 ನೇ ಪಕ್ಷಗಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು  ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**